ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ **22.3.2019**

ಮುಂದುವರಿದ ಪಾಟೀ ಸವಾಲುಃ ಶ್ರೀ ಹೆಚ್ ಇ ಪಿ ವಕೀಲರಿಂದ

ನನಗೆ ಫ್ರಾಸಾ-2 ರವರ ಪರಿಚಯು ಇರುತ್ತದೆ. ಆತ ನನ್ನ ಸ್ನೇಹಿತ. ಫ್ರಾಸಾ-2 ರವರ ಹೆಂಡತಿ ಚೇತನ ರವರು ನಮ್ಮ ಶಾಲೆಯಲ್ಲಿ ಮೊದಲಿನಿಂದ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ನಾನು ದೂರು ನೀಡುವ ಸಮಯದಲ್ಲಿ ಆಕೆ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ನಾನು ಫ್ರಾಸಾ-2 ರವರ ಮೇಲೆ ಪ್ರಭಾವ ಬೀರಿ ನಿಪಿ-2 ಕ್ಕೆ ಅವರ ಸಹಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ಬರವಣಿಗೆಯಾದ ಸಮಯದಲ್ಲಿ ಚಾಸಾ-2 ರವರು ಹಾಜರಿರಲಿಲ್ಲ ಎಂದರೆ ಸರಿಯಲ್ಲ.

ಚಾಸಾ-4 ನನ್ನ ಸಂಬಂಧಿಕರು ಎಂದರೆ ಸರಿ. ಆತ ನನಗೆ ಚಿಕ್ಕಪ್ಪನಾಗಬೇಕು. ಟ್ರಸ್ಟ್ ಸ್ಥಾಪನೆಯಾದ ನಂತರ ಆದ ಹಾಗೂ ಹೊಗುಗಳ ಬಗ್ಗೆ ಅವರಿಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಚಾಸಾ-4 ರವರು ಬೇರೆ ಕೆಲಸದ ಮೇರೆಗೆ ಠಾಣೆಯಲ್ಲಿ ಇದ್ದ ಅಗ ಅವರನ್ನು ಪೊಲೀಸರು ಪಂಚರಾಗಿ ಕರೆದಿರುತ್ತಾರೆ. ನಾನು ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ಪೊಲೀಸರು ಚಾಸಾ-4 ರವರಿಗೆ ತಿಳಿಸಿರುತ್ತಾರೆ. ನಿಪಿ-1 ನ್ನು ನಮ್ಮ ಶಾಲೆಯಲ್ಲೆ ಬೆರಳಚ್ಚು ಮಾಡಿಸಲಾಗಿರುತ್ತದೆ. ನಿಪಿ-1 ನ್ನು ತಯಾರು ಮಾಡಿದ ಸಮಯದಲ್ಲಿ ಚಾಸಾ-10 ರವರು ಹಾಜರಿದ್ದರು. ಚಾಸಾ-10 ರವರು ನೀಡಿದ ಮಾಹಿತಿಯಂತೆ ನಿಪಿ-1 ನ್ನು ತಯಾರು ಮಾಡಲಾಗಿರುತ್ತದೆ. ನಿಪಿ-1 ರಲ್ಲಿ ಯಾವ ವರ್ಷದಿಂದ ಯಾವ ವರ್ಷದವರೆವಿಗೆ ಹಣ ದುರುಪಯೋಗವಾಗಿರುತ್ತದೆ ಎಂದು ನಿಖರವಾಗಿ ತಿಳಿಸಿರುವುದಿಲ್ಲ ಎಂದರೆ ಸರಿ. ಲೆಕ್ಕ ಪತ್ರಗಳನ್ನು ಆಧರಿಸಿ ನಿಪಿ-1 ನ್ನು ತಯಾರು ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎನ್ನುವರು.

ನಿಪಿ-1 ರಲ್ಲಿ 2001-2006 ನೇ ಇಸವಿಯಲ್ಲಿ ಯಾರು ಖಜಾಂಚಿ ಮತ್ತು ಕಾರ್ಯದರ್ಶಿಯಾಗಿದ್ದರು ಎಂದು ತಿಳಿಸಿರುವುದಿಲ್ಲ ಎಂದರೆ ಸರಿ. ಮೇಲೆ ಹೇಳಿದಂತೆ

ಖಜಾಂಚಿ ಮತ್ತು ಕಾರ್ಯದರ್ಶಿಯವರ ಹೆಸರು ನಿಪಿ-1 ರಲ್ಲಿ ತಿಳಿಸಲು ಅವಶ್ಯಕತೆ ಇಲ್ಲದ ಕಾರಣ ಹೇಳಿರುವುದಿಲ್ಲ. ನಿಪಿ-4 ರಂತೆ ನಾನು ನೇರವಾಗಿ ದೂರು ದಾಖಲಿಸಲು ಸಾಧ್ಯವಿಲ್ಲ ಎಂದರೆ ಸರಿ. ನಿಪಿ-1 ರ ದೂರು ಸಲ್ಲಿಸಲು ಯಾವ ಕಾರಣಕ್ಕೆ ವಿಳಂಬವಾಗಿರುತ್ತದೆ ಎಂದು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ತಿಳಿಸಿದಂತೆ ಯಾವ ದಾಖಲೆಯನ್ನು ಪಡೆದುಕೂಳ್ಳಲು ವಿಳಂಬವಾಗಿರುತ್ತದೆ ಎಂದರೆ ನೆನಪಿಲ್ಲ. ನಾನು ಯಾವುದೆ ದಾಖಲೆಗಳನ್ನು ಪಡೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ, ನಾನು ದೂರು ದಾಖಲು ಮಾಡಲು ವಿಳಂಬವಾದ ಕಾರಣ ದಾಖಲೆ ಪಡೆದುಕೊಳ್ಳಲು ವಿಳಂಬವಾಗಿರುತ್ತದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ತನಿಖೆಯಲ್ಲಿ ಸಹಕಾರಿಯಾಗಿರುತ್ತೇನೆ ಮತ್ತು ಹೇಳಿಕೆ ನೀಡಿರುತ್ತೇನೆ.

ದೂರು ನೀಡಿದ ನಂತರ ಪೊಲೀಸರು ನಮ್ಮ ಲೆಕ್ಕ ದಾಖಲೆಗಳನ್ನು ತರಿಸಿ ಅವರು ಬೇರೆ ಲೆಕ್ಕ ಪರಿಶೋಧನೆ ಮಾಡಿಸಿರುವುದಿಲ್ಲ. ನಿಪಿ-1 ರ 6 ನೇ ಪ್ಯಾರದಲ್ಲಿ ನೀಡಿರುವ ಲೆಕ್ಕ ಪರಿಶೋಧನಾ ವರದಿ ನಿಪಿ-13 ಆಗಿರುತ್ತದೆ. ನಿಪಿ-2 ರಲ್ಲಿ ತೋರಿಸಿರುವ ಎಲ್ಲಾ ದಾಖಲೆಗಳು ಟ್ರಸ್ಟಿನ ಚೇರ್‌ಮ್ಯಾನ್ ಕೊಠಡಿಯಲ್ಲಿ ಇತ್ತು.

ಚಾಸಾ-17 ರವರು ನಮ್ಮ ಶಾಲೆಯನ್ನು ಬೇಟಿ ಮಾಡಿ ಎಲ್ಲವನ್ನು ಪರಿಶೀಲಿಸಿರುತ್ತಾರೆ. ನಮ್ಮ ಶಾಲೆಯಲ್ಲಿ ದಿನಚರಿ ಪುಸ್ತಕ, ಶಾಲೆಯ ಅಕೌಂಟ್ ಲೆಡ್ಜರ್, ಟ್ರಸ್ಟ್ ಅಕೌಂಟ್ ಲೆಡ್ಜರ್ ಮತ್ತು ಲೆಡ್ಜರ್ ಇರುತ್ತದೆ ಎಂದರೆ ಸರಿ. ಸದ್ರಿ ಎಲ್ಲಾ ದಾಖಲೆಗಳು ಶಾಲೆ ಆಡಳಿತ ಕಛೇರಿಯಲ್ಲಿ ಇರುತ್ತದೆ. ಕಟ್ಟಡದ ಕಾಮಗಾರಿಗೆ ಸಂಬಂಧಪಟ್ಟಂತೆ ವೋಚರ್, ರಶೀದಿ ಮತ್ತು ಕಾಮಗಾರಿ ಅಕೌಂಟ್ ಲೆಡ್ಜರ್ ಆಡಳಿತ ಕಛೇರಿಯಲ್ಲಿ ಇರುತ್ತದೆ. ನಿಪಿ-2 ರಲ್ಲಿ ತಿಳಿಸಿರುವ ದಾಖಲೆಗಳನ್ನು ನಾನೆ ಪೊಲೀಸರಿಗೆ ನೀಡಿರುತ್ತೇನೆ. ಮೇಲೆ ಹೇಳಿದ ದಾಖಲೆಗಳನ್ನು ನಾನು ಪೊಲೀಸರಿಗೆ ತೋರಿಸಲು ಪ್ರಯತ್ನ ಪಟ್ಟಿರುವುದಿಲ್ಲ.

ನಿಪಿ-14 ರಿಂದ 17 ದಾಖಲೆಗಳು ಲೆಕ್ಕ ಪರಿಶೋಧನೆ ದಾಖಲೆಗಳು ಚಾಸಾ-8 ಮತ್ತು 10 ರವರ ಬಳಿ ಇರುತ್ತದೆ ಎಂದು ತೋರಿಸುತ್ತದೆ ಎಂದರೆ ಸರಿಯಲ್ಲ. ನಿಪಿ-2 ಮಾಡುವ ಕಾಲಕ್ಕೆ ನಾನು ಚಾಸಾ-8 ಮತ್ತು 10 ರವರನ್ನು ಬರಮಾಡಿಕೊಂಡು ಅವರ ಬಳಿ ಇರುವ ಯಾವುದೆ ದಾಖಲೆಯನ್ನು ಕೇಳಿರುವುದಿಲ್ಲ. ನಿಪಿ-14 ರಲ್ಲಿ ತೋರಿಸಿರುವ ದಾಖಲೆಗಳು ಈಗ ನಮ್ಮ ಕಛೇರಿಯಲ್ಲಿ ಇರುತ್ತದೆ. ಚಾಸಾ-17 ರವರು ನಿಪಿ-2 ಮಾಡುವ ಕಾಲಕ್ಕೆ ಕೆಲವು ಮೂಲ ದಾಖಲೆಗಳು ಮತ್ತು ಕೆಲವು ದೃಢೀಕೃತ ನಕಲಿನ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ನಿಪಿ-2 ನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಮ್ಮ ಸಂಸ್ಥೆಯ ಯಾವುದೆ ಬ್ಯಾಂಕ್ ಖಾತೆಗಳ ಪಾಸ್ ಪುಸ್ತಕಗಳನ್ನು ನಿಪಿ-2 ಮಾಡುವ ಕಾಲಕ್ಕೆ ಪೊಲೀಸರಿಗೆ ನಾನು ನೀಡಿರುವುದಿಲ್ಲ. ಸದ್ರಿ ಪಾಸ್ ಪುಸ್ತಕಗಳು ನ್ಯಾಯಾಲಯದ ಮುಂದೆ ಕಂಡು ಬರುತ್ತಿಲ್ಲ ಎಂದರೆ ಸರಿ.

ನಿಡಿ-1 ರಿಂದ 5 ದಾಖಲೆಗಳನ್ನು ನಾನೆ ಪೊಲೀಸ್ ಠಾಣೆಯಲ್ಲಿ ಪೊಲೀಸರಿಗೆ ನೀಡಿರುತ್ತೇನೆ. ನಿಡಿ-1 ರಿಂದ 5 ದಾಖಲೆಗಳನ್ನು ಈ ಕೇಸು ದಾಖಲಾದ ನಂತರ ಚಾಸಾ-16 ರವರು ನೀಡಿರುತ್ತಾರೆ ಎಂದರೆ ಸಾಕ್ಷಿ ಅದನ್ನು ಪಡೆದುಕೂಂಡ ನಂತರ ದೂರು ನೀಡಿರುತ್ತೇನೆ ಎನ್ನುವರು. ಸಾಕ್ಷಿ ಮುಂದುವರಿದು ನೆನಪಿಲ್ಲ ಎನ್ನುವರು. ಸಾಕ್ಷಿ ಮುಂದುವರಿದು ಅದನ್ನು ಪೊಲೀಸರಿಗೆ ನೀಡಿರುವುದಿಲ್ಲ ಎನ್ನುವರು. ನಿಡಿ-1 ರಿಂದ 5 ದಾಖಲೆಗಳು ನನ್ನ ಆಡಳಿತ ಕಛೇರಿಯಲ್ಲಿ ಇರಲಿಲ್ಲ ಎಂದರೆ ನೆನಪಿಲ್ಲ. ನಿಪಿ-5 ರಿಂದ 7 ದಾಖಲೆಗಳು ಟ್ರಸ್ಟಗೆ ಸಂಬಂಧಪಟ್ಟ ಕಾರಣ ಅದನ್ನು ನಾನು ಹಾಜರುಪಡಿಸಿರುತ್ತೇನೆ ಎನ್ನುವರು. ನಿಪಿ-5 ರಿಂದ 7 ದಾಖಲೆಗಳಿಗೂ ಮತ್ತು ಈ ಕೇಸಿಗೂ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯವರು ವಾರ್ಷಿಕ ಆದಾಯ ದಾಖಲೆಗಳು ಮತ್ತು ಸಾಲ ದಾಖಲೆಗಳನ್ನು ಪೊಲೀಸರಿಗೆ ನೀಡಿರುವುದಿಲ್ಲ. ನಿಪಿ-13 ಸರಿಯಾದ ಲೆಕ್ಕ ಪರಿಶೋಧನ ವರದಿಯಾಗಿರುತ್ತದೆ ಎಂದು ಪೊಲೀಸರಿಗೆ ನೀಡಿರುತ್ತೇವೆ ಎಂದರೆ ಸರಿ. ನಮ್ಮ ಶಾಲೆಯಲ್ಲಿ ಇದ್ದ ಎಲ್ಲಾ ದಾಖಲೆಗಳನ್ನು ನೀಡಿ ನಿಪಿ-13 ನ್ನು ಮಾಡಿಸಿರುತ್ತೇವೆ. ನಿಪಿ-13 ಮಾಡಲು ನೀಡಿದ ದಾಖಲೆಗಳನ್ನು

ಪೊಲೀಸರಿಗೆ ನೀಡಿರುವುದಿಲ್ಲ. ನಿಪಿ-2 ನ್ನು ನಮಗೆ ಬೇಕಾದ ರೀತಿಯಲ್ಲಿ ನಾನು, ಚಾಸಾ-8 ಮತ್ತು ಚಾಸಾ-10 ರವರು ಪೊಲೀಸ್ ಠಾಣೆಯಲ್ಲಿ ಸೃಷ್ಟಿ ಮಾಡಿ ಪಂಚರುಗಳ ಸಹಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-13 ನ್ನು ಸೃಷ್ಟಿ ಮಾಡಿ ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಟ್ರಸ್ಟ್ ಡೀಡ್‌ನಲ್ಲಿ ವಿಚಾರಣಾಧಿಕಾರಿಯನ್ನು ನೇಮಕ ಮಾಡಿಕೊಳ್ಳಲು ನಮಗೆ ಅಧಿಕಾರ ಇರಲಿಲ್ಲ ಎಂದರೆ ಗೊತ್ತಿಲ್ಲ. ನಮ್ಮ ಕಾರ್ಯಕ್ಷೇತ್ರ ಕೊಡಗಿಗೆ ಮಾತ್ರ ಸೀಮಿತ ಎಂದರೆ ಸರಿ. ಹೊರಗಿನ ಕ್ಷೇತ್ರದಿಂದ ವಿಚಾರಣಾಧಿಕಾರಿಯನ್ನು ನೇಮಕ ಮಾಡಿಕೊಳ್ಳುವ ಅಧಿಕಾರ ಇರಲಿಲ್ಲ ಎಂದರೆ ಗೊತ್ತಿಲ್ಲ.

ಆರೋಪಿಗಳು ಹಣವನ್ನು ಯಾವ ರೀತಿ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸರಿ. ಮಹಾ ಸಭೆ ಕರೆಯದೆ ಆರೋಪಿಗಳನ್ನು ಟ್ರಸ್ಟ್ ನಿಂದ ಆಚೆ ಹಾಕಲು ಅಧಿಕಾರ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಮಹಾ ಸಭೆ ಕರೆದಿರುತ್ತೇವೆ ಎನ್ನುವರು. ಸದ್ರಿ ಮಹಾ ಸಭೆಯ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸರಿ. ನಾನು, ಚಾಸಾ-8 ಮತ್ತು 10 ರವರು ಟ್ರಸ್ಟ್ ವಿರುದ್ಧ ನಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಯಾರು ಟ್ರಸ್ಟ್ ಡೀಡ್ ನಂತೆ ನಡೆದುಕೊಂಡಿರುವುದಿಲ್ಲ ಎನ್ನುವರು.

ನಿಪಿ-7 ರಲ್ಲಿ ತಿಳಿಸಿದಂತೆ ಕ್ರಿಮಿನಲ್ ಕೇಸುಗಳಲ್ಲಿ ಆರೋಪಿಗಳಿಗೆ ನ್ಯಾಯಾಲಯದಿಂದ ಬಿಡುಗಡೆಯಾಗಿರುತ್ತದೆ ಎಂದರೆ ಸಾಕ್ಷಿ ಕೆಲವು ಕೇಸುಗಳು ರಾಜಿಯಲ್ಲಿ ತೀರ್ಮಾನವಾಗಿರುತ್ತದೆ ಎನ್ನುವರು. ನಿಪಿ-7, 10 ರಿಂದ 12 ಮತ್ತು 19 ದಾಖಲೆಗಳಿಗೂ ಈ ಕೇಸಿಗೂ ಯಾವುದೆ ಸಂಬಂಧ ಇರುವುದಿಲ್ಲ ಮತ್ತು ಅನಾವಶ್ಯಕತೆ ದಾಖಲೆಗಳು ಎಂದರೆ ಸರಿಯಲ್ಲ. ಮೇಲೆ ಹೇಳಿದ ದಾಖಲೆಗಳಲ್ಲಿ ಆರೋಪಿಗಳು ಎಷ್ಟು ಹಣ ದುರುಪಯೋಗಿ ಪಡಿಸಿಕೊಂಡಿರುತ್ತಾರೆ ಎಂದು ನಿಖರವಾಗಿ ತಿಳಿಸಿರುವುದಿಲ್ಲ ಎಂದರೆ ಸರಿ.

ಆರೋಪಿಗಳು ಎಷ್ಟು ಹಣ ಪಡೆದುಕೊಂಡಿರುತ್ತಾರೆ ಎಂದು ತೋರಿಸಲು ನಿಪಿ-20 ನ್ನು ಹಾಜರುಪಡಿಸಿರುತ್ತೇನೆ. ನಿಪಿ-20 ನ್ನು ನಾನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿರುತ್ತೇನೆ. ಆರೋಪಿಗಳು ಹಣ ದುರುಪಯೋಗ ಪಡಿಸಿಕೊಂಡಿರುತ್ತೇವೆ ಎಂದು ನಿಪಿ-20 ರಲ್ಲಿ ಒಪ್ಪಿಕೊಂಡಿರುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ. ವಿಚಾರಣೆಯ ಸಮಯದಲ್ಲಿ ಚಾಸಾ-8 ಮತ್ತು 10 ರವರು ಹೇಳಿಕೆ ನೀಡಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ ಎಂದರೆ ಸರಿ.

1 ನೇ ಆರೋಪಿ ನಮ್ಮ ಟ್ರಸ್ಟ್ಗೆ ಸಾಕಷ್ಟು ಶ್ರಮಿಸಿರುತ್ತಾರೆ, ಅವರ ವಿರುದ್ಧ ವಿನಾ ಕಾರಣ ಸುಳ್ಳು ಕತೆ ಸೃಷ್ಟಿ ಮಾಡಿ ಈ ಸುಳ್ಳು ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳನ್ನು ಟ್ರಸ್ಟ್ ನಿಂದ ಆಚೆ ಹಾಕಲು ಮತ್ತು ಸಿವಿಲ್ ಕೇಸಿಗೆ ಅನುಕೂಲವಾಗಲು ಈ ಸುಳ್ಳು ಕೇಸನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಕೇಸಿನ ಆರೋಪಿಗಳು ಯಾವುದೆ ಟ್ರಸ್ಟ್ ನ ಹಣವನ್ನು ದುರುಪಯೋಗಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಮತ್ತು ಆರೋಪಿಗಳಿಗೆ ನಾವೆ ಪರಿಹಾರ ನೀಡಬೇಕು ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ ದ ನ್ಯಾ ದಂ, ಕುಶಾಲನಗರ.